**ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

ಸ್ಪೆಷಲ್ ಕೇಸ್ ನಂಃ **161/2022**

ಚಾಸಾಃ **1** ಅಸಾಃ **1**

| | |
|---|---|
| ಹೆಸರು: | ದಿನೇಶ್ |
| ತಂದೆಯ / ಗಂಡನ ಹೆಸರು: | ಸಿದ್ದರಾಜು |
| ವಯಸ್ಸು: | 26 ವರ್ಷ |
| ಕೆಲಸಃ | ಕೂಲಿ |
| ವಾಸಸ್ಥಳ: | ಬೇಲೂರು |

ದಿನಾಂಕಃ **26/07/2023** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ ಃ

ಆರೋಪಿತರು ನನಗೆ ಗೊತ್ತು. ಆರೋಪಿ 1 ಮತ್ತು 2 ಗೆಂಡೇಹಳ್ಳಿ ಗ್ರಾಮದವರು, ಆರೋಪಿ 3 ಸಾಗರ್ ಬೇಲೂರು, ಆರೋಪಿ–4 ಸಚ್ಚಿನ್ ಹುಣಸೇಕೆರೆ ಗ್ರಾಮದವರು. ಎಲ್ಲಾ ಆರೋಪಿತರು ಒಕ್ಕಲಿಗ ಜಾತಿಗೆ ಸೇರಿದವರಿರುತ್ತಾರೆ. ನಾನು ಹಂದಿಜೋಗಿ ಪರಿಶಿಷ್ಟ ಜಾತಿಯ ಸದಸ್ಯನಿರುತ್ತೇನೆ. ಉಳಿದ ಸಾಕ್ಷಿದಾರರು ಗೊತ್ತು. ನಾನು 3 ನೇ ತರಗತಿಯವರೆಗೆ ಓದಿರುತ್ತೇನೆ.

2. 25.12.2021 ರಂದು ಸಂಜೆ 7.30 ಕ್ಕೆ ಒಕ್ಕಲಿಗರ ಕಲ್ಯಾಣ ಮಂಟಪ, ಬೇಲೂರು, ಅಂಬೇಡ್ಕರ್ ಸರ್ಕಲ್ ಹತ್ತಿರ ಗಲಾಟೆಯಾಗಿರುತ್ತದೆ. ಅದೇ ದಿನ ಮಧ್ಯಾಹ್ನ 12.30–1.00 ಗಂಟೆಗೆ ಆರೋಪಿತರಿಗೂ ನಮಗೂ ಗಲಾಟೆಯಾಗಿರುತ್ತದೆ. ಹನುಮಜಯಂತಿ ಸಲುವಾಗಿ ಕುಣಿಯುತ್ತಿದ್ದೆವು, ಆ ಸಮಯದಲ್ಲಿ ನಾನು ತಪ್ಪಾಗಿ ಹೋಗಿ ಆರೋಪಿ 4 ರವರ ಕಾಲು ತುಳಿದೆ.

ಅಲ್ಲಿಂದ ಕೆಂಪೇಗೌಡ ಸರ್ಕಲ್ ಹತ್ತಿರ ಬಂದು ಹಿಂಭಾಲಿಸಿ, ಒಕ್ಕಲಿಗರ ಕಲ್ಯಾಣ ಮಂಟಪದ ಹತ್ತಿರ ಬಂದು, ನನ್ನನ್ನು ಅಡ್ಡಗಟ್ಟಿ ಕೆಡವಿ ಹೊಡೆದಿರುತ್ತಾರೆ.

3. ಆರೋಪಿತರು ನನಗೆ ಹಂದಿಚಿಕ್ಕ ಜಾತಿಯವರನಾ ಕೇಯಾ ಎಂದು ಅವಾಚ್ಯ ಶಬ್ದಗಳಿಂದ ಬೈದರು ಮತ್ತು ಆರೋಪಿತರು ನನಗೆ ನಿನ್ನ ಜಾತಿ ಯಾವುದು ಅಂತಾ ಹೇಳಿ ಕಲ್ಲಿನಿಂದ ನನಗೆ ಕಾಲಿಗೆ 4 ನೇ ಆರೋಪಿ ಹೊಡೆದರು. ಉಳಿದ ಆರೋಪಿತರು ನನಗೆ ಹೊಡೆದಿರುತ್ತಾರೆ. ಆರೋಪಿ 1 ರಿಂದ 3 ರವರು ನನಗೆ ಕೈ ಪಂಚ್ ನಿಂದ ನನ್ನ ಮುಖಕ್ಕೆ ಬಾಯಿಗೆ ಹೊಡೆದಿರುತ್ತಾರೆ. ನನಗೆ ಮುಖಕ್ಕೆ ರಕ್ತಗಾಯವಾಗಿರುತ್ತದೆ ಕಾಲು ಮೂಳೆ ಮುರಿದಿರುತ್ತದೆ. ಗಲಾಟೆಯನ್ನು ಚಾಸಾ–2 ಮತ್ತು 3 ರವರು ಜಗಳ ಬಿಡಿಸಿರುತ್ತಾರೆ.

4. ನಂತರ ನಾನು ಬೇಲೂರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಬೇಲೂರು ಆಸ್ಪತ್ರೆಯಿಂದ ಸರ್ಕಾರಿ ಆಸ್ಪತ್ರೆ ಹಾಸನದಲ್ಲಿ ಹೆಚ್ಚಿನ ಚಿಕಿತ್ಸೆಗಾಗಿ ಒಂದು ವಾರ ದಾಖಲಾಗಿರುತ್ತೇನೆ. ಆರೋಪಿತರು ನನಗೆ ನಿನ್ನನ್ನು ನೋಡಿಕೊಳ್ಳುತ್ತೇನೆ ಅಂತಾ ಬೆದರಿಕೆ ಹಾಕಿರುತ್ತಾರೆ. ಪೊಲೀಸರು ಹಾಸನ ಆಸ್ಪತ್ರೆಯಲ್ಲಿ ಬಂದು ನನ್ನನ್ನು ವಿಚಾರಣೆ ಮಾಡಿ, ನಾನು ದೂರು ಕೊಟ್ಟಿರುತ್ತೇನೆ. ದೂರು ನೋಡುತ್ತಿದ್ದು, ದೂರನ್ನು ನಿಪಿ–1 ಎಂದು ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು. ಆರೋಪಿತರಿಗೆ ನಮ್ಮದು ಯಾವುದು ಜಾತಿ ಎಂದು ಗೊತ್ತಿದೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ತನಿಖಾಧಿಕಾರಿ ಹಾಜರುಪಡಿಸಿದ್ದ,

ಒಂದು ಕಲ್ಲನ್ನು ಮುಮಾ–1 ಎಂದು, ಕಬ್ಬಿಣದ ಪಂಚ್‌ನ್ನು ಮುಮಾ–2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ಎ ಎಂ ವಕೀಲರಿಂದಃ

ಪಾಟೀ ಸವಾಲಿಗೆ ವೇಳೆ ಕೇಳಿದ್ದು, ರೂ. 300/– ಖರ್ಚು ಸಮೇತ ಆದೇಶ ಮಾಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ.